**All India Radio: Bangalore**
**National Bulletin In Kannada**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**11.06.2025 / 1.10 pm**

ಮುಖ್ಯಾಂಶಗಳು

೧. ಮೂಲಸೌಕರ್ಯ ಅಭಿವೃದ್ಧಿಯೇ ಭಾರತದ ಬೆಳವಣಿಗೆಯ ಆಧಾರಸ್ತಂಭ- ಪ್ರಧಾನಿ ನರೇಂದ್ರ ಮೋದಿ ಅಭಿಮತ

೨. ೨೦೨೪-೨೫ರಲ್ಲಿ ೧೧.೨ ಲಕ್ಷ ಕೋಟಿ ರೂಪಾಯಿ ತಲುಪಿದ ದೇಶದ ಬಂಡವಾಳ ವೆಚ್ಚ

೩. ಯೋಗ ಸಂಗಮ ಕಾರ್ಯಕ್ರಮ ಆತಿಥ್ಯ ವಹಿಸಲು ೫೫ ಸಾವಿರಕ್ಕೂ ಅಧಿಕ ಸಂಸ್ಥೆಗಳಿಂದ ನೋಂದಣಿ

೪. ಕ್ಯಾನ್ಸರ್ ಚಿಕಿತ್ಸೆಯಲ್ಲಿ ನಿಖರತೆ, ಗೌಪ್ಯತೆ ಹೆಚ್ಚಿಸಲು ಕೃತಕಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನ ಅನಾವರಣ

೫. ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್: ಫೈನಲ್ ಪಂದ್ಯದಲ್ಲಿಂದು ಆಸ್ಟ್ರೇಲಿಯಾ - ದಕ್ಷಿಣ ಆಫ್ರಿಕಾ ಮುಖಾಮುಖಿ

*********************************

ಕಳೆದ ಹನ್ನೊಂದು ವರ್ಷಗಳಲ್ಲಿ ಆಗಿರುವ ಮೂಲಸೌಕರ್ಯ ಅಭಿವೃದ್ಧಿಯೇ ಭಾರತದ ಬೆಳವಣಿಗೆಯ ಮತ್ತು ಆತ್ಮನಿರ್ಭರತೆಯ ಆಧಾರಸ್ತಂಭವೆಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆಡಳಿತಕ್ಕೆ ಬಂದು ಎನ್‌ಡಿಎ ಸರ್ಕಾರ ಹನ್ನೊಂದು ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿ, ಭವ್ಯವಾದ ಮೂಲಸೌಕರ್ಯ ಅಭಿವೃದ್ಧಿ ಭಾರತದ ಬೆಳವಣಿಗೆಯ ದಿಕ್ಕನ್ನು ಪರಿವರ್ತಿಸಿದೆ. ಭಾರತದ ವೇಗವಾಗಿ ವಿಸ್ತರಿಸುತ್ತಿರುವ ಮೂಲಸೌಕರ್ಯ ಜಾಲ ಜನಜೀವನವನ್ನು ಸುಲಭವಾಗಿಸಿದ್ದು, ಸಮೃದ್ಧಿಯನ್ನು ಹೆಚ್ಚಿಸಿದೆ.

*********************************

ಕಳೆದ ಒಂದು ದಶಕದಲ್ಲಿ ಭಾರತ, ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಇಂದಿನ ಮಾಲಿಕೆಯಲ್ಲಿ ದೂರದರ್ಶಿ ನಾಯಕತ್ವದಡಿ ಭಾರತದ ಮೂಲಸೌಯರ್ಕ ಅಭಿವೃದ್ಧಿ ಕುರಿತ ವರದಿ ಇಲ್ಲಿದೆ.

ಕಳೆದ ಹನ್ನೊಂದು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ದೂರದರ್ಶಿ ನಾಯಕತ್ವದಡಿ ಮೂಲಸೌಕರ್ಯ ಕ್ಷೇತ್ರದಲ್ಲಿ ಭಾರತ ಪರಿವರ್ತನಾತ್ಮಕ ಪ್ರಗತಿಯನ್ನು ಕಂಡಿದೆ. ಈ ಒಂದು ದಶಕ ಭಾರತದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸಂಪರ್ಕ ಮತ್ತು ಭವಿಷ್ಯಕ್ಕೆ ಸಿದ್ಧ ತಂತ್ರಜ್ಞಾನಾಧಾರಿತ ಮೂಲಸೌಕರ್ಯದ ಅಭಿವೃದ್ಧಿಗೆ ಸಾಕ್ಷಿಯಾಗಿದೆ. 'ಭಾರತ ಮಾಲಾ ಯೋಜನೆ' ಯಿಂದ 'ಸ್ಮಾರ್ಟ್ ಸಿಟಿ' ಯೋಜನೆಯವರೆಗೆ 'ಮೇಕ್ ಇನ್ ಇಂಡಿಯಾ' , 'ವಂದೇ ಭಾರತ್' ಸೇರಿದಂತೆ ಅನೇಕ ಮಹತ್ವಾಕಾಂಕ್ಷಿ ಯೋಜನೆಗಳ ಮೂಲಕ ಕಳೆದ ಹನ್ನೊಂದು ವರ್ಷಗಳಲ್ಲಿ ಭಾರತದ ಆಧುನಿಕ ಮೂಲಸೌಕರ್ಯಕ್ಕೆ ಭದ್ರ ಬುನಾದಿ ಹಾಕಲಾಗಿದೆ. ಇಂದಿನ ಭಾರತ, ಜಾಗತಿಕ ಮಟ್ಟದ ರಸ್ತೆಗಳು, ರೈಲು ಮಾರ್ಗಗಳು, ವಿಮಾನ ನಿಲ್ದಾಣಗಳನ್ನು ಹೊಂದಿದ್ದು, ಇನ್ನೂ ಹಲವು ಮಹತ್ತರ ಮೂಲಸೌಕರ್ಯ ಸಾಧನೆಗಳನ್ನು ಮಾಡಿದೆ. 'ಅಟಲ್ ಸುರಂಗ'ದಿಂದ 'ಏಕತಾ ಪ್ರತಿಮೆ' ಹಾಗೂ ಇತ್ತೀಚೆಗೆ ಉದ್ಘಾಟಿಸಲ್ಪಟ್ಟ ವಿಶ್ವದ ಅತಿ ಎತ್ತರದ 'ಚಿನಾಬ್ ರೈಲು ಮಾರ್ಗ'ದಂತಹ ಯೋಜನೆಗಳು ಕೇವಲ ಕಟ್ಟಡ, ತಂತ್ರಜ್ಞಾನ ಅಥವಾ ಸೇತುವೆ ಬಗೆಗೆ ಮಾತ್ರವಲ್ಲದೆ, ಒಂದು ಬಲಿಷ್ಠ ಆತ್ಮನಿರ್ಭರ ಭಾರತ ನಿರ್ಮಾಣದ ಪಯಣದ ಮೈಲಿಗಲ್ಲಾಗಿವೆ. ಇದು ಕೇವಲ

ಮೂಲಸೌಕರ್ಯ ಅಭಿವೃದ್ಧಿ ಕುರಿತು ಮಾತ್ರವಲ್ಲದೆ, ಸಮೃದ್ಧ, ಸಂಪರ್ಕಿತ ಮತ್ತು ಸುಸ್ಥಿರ ಭಾರತದ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುವ ಉಪಕ್ರಮಗಳಾಗಿವೆ.

***********************************

ಕಳೆದ ಹನ್ನೊಂದು ವರ್ಷಗಳಲ್ಲಿ ದೇಶದ ಬಂಡವಾಳ ವೆಚ್ಚ ಗಮನಾರ್ಹವಾಗಿ ಬೆಳೆದಿದ್ದು, ೨೦೨೪-೨೫ರಲ್ಲಿ ೧೧.೨ ಲಕ್ಷ ಕೋಟಿ ರೂಪಾಯಿಗಳನ್ನು ತಲುಪಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಆಡಳಿತಕ್ಕೆ ಬಂದು ಎನ್‌ಡಿಎ ಸರ್ಕಾರ ಹನ್ನೊಂದು ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಬರೆದಿರುವ ವಿಶೇಷ ಲೇಖನದಲ್ಲಿ ಸಚಿವರು, ಕಳೆದ ದಶಕದಲ್ಲಿ ಭಾರತದಲ್ಲಿ ಮೂಲಸೌಕರ್ಯ ತ್ವರಿತಗತಿಯಲ್ಲಿ ಬೆಳೆದಿದೆ. ಸುಮಾರು ೫೯ ಸಾವಿರ ಕಿಲೋಮೀಟರ್ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ. ೩೭ ಸಾವಿರದ ೫೦೦ ಕಿಲೋಮೀಟರ್‌ಗಳಿಗೂ ಹೆಚ್ಚು ರೈಲ್ವೆ ಹಳಿಗಳನ್ನು ಹಾಕಲಾಗಿದೆ ಎಂದು ಅವರು ತಿಳಿಸಿದ್ದಾರೆ. ಡಿಜಿಟಲ್ ಪರಿವರ್ತನೆ ಕುರಿತು ತಿಳಿಸಿರುವ ಸಚಿವರು, ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಯರ್ಕ ಜಾಗತಿಕ ಮಾನದಂಡವಾಗಿ ಬೆಳೆದಿದೆ. ವ್ಯಾಪಕ ವ್ಯಾಪ್ತಿ ಹಾಗೂ ಒಳಗೊಳ್ಳುವಿಕೆಗಾಗಿ ಯುಪಿಐ, ಆಧಾರ್ ಮತ್ತು ಡಿಜಿ ಲಾಕರ್ ತಂತ್ರಾಂಶಗಳನ್ನು ಜಾಗತಿಕ ಮಟ್ಟದಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಈವರೆಗೆ ೧೪೧ ಕೋಟಿ ಆಧಾರ್ ನೋಂದಣಿಗಳಾಗಿದ್ದು, ಪ್ರತಿದಿನ ೬೦ ಕೋಟಿಗೂ ಅಧಿಕ ಯುಪಿಐ ವಹಿವಾಟುಗಳು ನಡೆಯುತ್ತಿವೆ. ಈವರೆಗೆ ೫೫ ಕೋಟಿ ಜನ್‌ಧನ್ ಖಾತೆಗಳನ್ನು ತೆರೆಯಲಾಗಿದ್ದು, ಇದು ಇಡೀ ಯೂರೋಪಿನ ಜನಸಂಖ್ಯೆಗಿಂತ ಹೆಚ್ಚಿನದ್ದಾಗಿದೆ.

***********************************

ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ವಿರುದ್ಧ ಭಾರತದ ದೃಢ ನಿಲುವನ್ನು ಜಾಗತಿಕ ಮಟ್ಟದಲ್ಲಿ ನಡೆದ ಹಲವು ಸಭೆಗಳಲ್ಲಿ ಸರ್ವಪಕ್ಷ ನಿಯೋಗ ಮನದಟ್ಟು ಮಾಡಿದೆ ಎಂದು ಸರ್ವ ಪಕ್ಷ ನಿಯೋಗವೊಂದರ ನೇತೃತ್ವ ವಹಿಸಿದ್ದ ಜೆಡಿಯು ಸಂಸದ ಸಂಜಯ್ ಝಾ ಹೇಳಿದ್ದಾರೆ. ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮ ನಿಯೋಗ, ಇಂಡೋನೇಷಿಯಾ, ಮಲೇಷಿಯಾ, ದಕ್ಷಿಣ ಕೋರಿಯಾ, ಜಪಾನ್ ಹಾಗೂ ಸಿಂಗಾಪುರಕ್ಕೆ ನೀಡಿದ ಭೇಟಿಗಳು ಯಶಸ್ವಿಯಾಗಿವೆ. ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ನಡೆದ ಸಭೆಯಲ್ಲಿ ವಿವಿಧ ಸರ್ವಪಕ್ಷ ನಿಯೋಗಳು ತಮ್ಮ ತಮ್ಮ ಅನುಭವಗಳನ್ನು ಹಾಗೂ ತಮಗೆ ದೊರೆದಂತಹ ಪ್ರತಿಕ್ರಿಯೆಗಳ ಕುರಿತು ವರದಿ ಹಂಚಿಕೊಂಡಿವೆ. ಸರ್ವಪಕ್ಷ ನಿಯೋಗಗಳ ಕಾರ್ಯದ ಕುರಿತು ಪ್ರಧಾನಿ ಶ್ಲಾಘನೆ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದ್ದಾರೆ.

***********************************

ಇದೇ ೨೧ ರಂದು ಆಚರಿಸಲಾಗುವ ಅಂತಾರಾಷ್ಟ್ರೀಯ ಯೋಗದಿನ ಭಾಗವಾದ ಯೋಗ ಸಂಗಮ ಕಾರ್ಯಕ್ರಮದ ಆತಿಥ್ಯ ವಹಿಸಲು ೫೫ ಸಾವಿರಕ್ಕೂ ಅಧಿಕ ಸಂಸ್ಥೆಗಳು ನೋಂದಾಯಿಸಿಕೊಂಡಿವೆ. ಇದು ಸಾಮೂಹಿ ಭಾಗವಹಿಸುವಿಕೆಯ ಹೊಸ ಮೈಲಿಗಲ್ಲಾಗಿದೆ ಎಂದು ಆಯೂಷ್ ಸಚಿವಾಲಯ ತಿಳಿಸಿದೆ. ರಾಜಸ್ಥಾನ, ಅತ್ಯಧಿಕ ಹನ್ನೊಂದು ಸಾವಿರಕ್ಕೂ ಹೆಚ್ಚು ಸಂಸ್ಥೆಗಳೊಂದಿಗೆ ಮುಂಚೂಣಿಯಲ್ಲಿದೆ. ಇನ್ನು ತೆಲಂಗಾಣದಲ್ಲಿ ೮ ಸಾವಿರಕ್ಕೂ ಅಧಿಕ, ಮಧ್ಯಪ್ರದೇಶದಲ್ಲಿ ಸುಮಾರು ೫ ಸಾವಿರ ಸಂಸ್ಥೆಗಳ ನೋಂದಣಿಗಳಾಗಿವೆ. ಆಯೂಷ್ ಸಚಿವಾಲಯ, ೧ ಲಕ್ಷಕ್ಕೂ ಅಧಿಕ ನೋಂದಣಿಗಳನ್ನು ಮಾಡಿಸಿಕೊಳ್ಳುವ ಗುರಿ ಹೊಂದಿದೆ. 'ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ' ಎಂಬುದು ಈ ವರ್ಷದ ಧ್ಯೇಯವಾಕ್ಯವಾಗಿದ್ದು, ಯೋಗ ಸಂಗಮ ಕಾರ್ಯಕ್ರಮವನ್ನು ೧ ಲಕ್ಷಕ್ಕೂ ಹೆಚ್ಚು ಸ್ಥಳಗಳಲ್ಲಿ ಆಯೋಜನೆಯಾಗುವ ನಿರೀಕ್ಷೆಯಿದೆ. ಇದೇ ೨೧ ರಂದು ನಡೆಯುವ ಅಂತಾರಾಷ್ಟ್ರೀಯ ಯೋಗದಿನದ ಪ್ರಧಾನ ಕಾರ್ಯಕ್ರಮ ಆಂಧ್ರಪ್ರದೇಶದ ವಿಜಯವಾಡಾದಲ್ಲಿ ಆಯೋಜಿಸಲಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ.

***********************************

ಕ್ಯಾನ್ಸರ್ ಚಿಕಿತ್ಸೆಯಲ್ಲಿ ನಿಖರತೆ ಮತ್ತು ಗೌಪ್ಯತೆಯನ್ನು ಹೆಚ್ಚಿಸಲು ಅಂತಾರಾಷ್ಟ್ರೀಯ ವಿಜ್ಞಾನಿಗಳ ತಂಡವೊಂದು, ಕೃತಕಬುದ್ಧಿಮತ್ತೆಯ ತಂತ್ರವೊಂದನ್ನು ಅನಾವರಣಗೊಳಿಸಿದೆ. ಈ ತಂತ್ರಜ್ಞಾನ ಜಾಗತಿಕ ಮಟ್ಟದಲ್ಲಿ ಕ್ಯಾನ್ಸರ್ ಮಾದರಿಗಳನ್ನು ಸುರಕ್ಷಿತವಾಗಿ ವಿಶ್ಲೇಷಿಸಲು ಸಹಾಯ ಮಾಡುವ ಜೊತೆಗೆ ವ್ಯಕ್ತಿಗತ ಮತ್ತು ಗೌಪ್ಯ ಚಿಕಿತ್ಸೆಗಳನ್ನು ವೇಗವಾಗಿ ಒದಗಿಸಲು ದಾರಿ ಮಾಡಿಕೊಡಲಿದೆ. ಈ ಅಧ್ಯಾಯನದಲ್ಲಿ ಆರು ದೇಶಗಳ ೩೦ ಸಂಶೋಧನಾ ತಂಡಗಳಿಂದ ಸಂಗ್ರಹಿಸಲಾದ ೭ ಸಾವಿರದ ೫೨೫ ಕ್ಯಾನ್ಸರ್ ಮಾದರಿಗಳ ಪ್ರೋಟೀನ್ ಪ್ರೊಫೈಲ್‌ಗಳ ವಿಶ್ಲೇಷಣೆ

ನಡೆಸಲಾಗಿದೆ. ಕಠಿಣ ಗೌಪ್ಯತಾ ಕಾನೂನುಗಳು ಮತ್ತು ಪ್ರಯೋಗಾಲಯಗಳ ತಾಂತ್ರಿಕ ವ್ಯತ್ಯಾಸಗಳಿಂದಾಗಿ ದೊಡ್ಡ ಪ್ರಮಾಣದ ಕ್ಯಾನ್ಸರ್ ದತ್ತಾಂಶವನ್ನು ಸಂಯೋಜಿಸಲು ಈವರೆಗೆ ಕಷ್ಟಸಾಧ್ಯವಾಗಿತ್ತು. ಆದರೆ, ಈಗ ಆಸ್ಟ್ರೇಲಿಯಾದ ಸಂಶೋಧಕರ ಪ್ರಕಾರ ಫೆಡರೇಟೆಡ್ ಡೀಪ್ ಲರ್ನಿಂಗ್ ತಂತ್ರಜ್ಞಾನದ ಮೂಲಕ ಎಐ ಬಾಟ್‌ಗಳಿಗೆ ತರಬೇತಿ ನೀಡಲಾಗಿದ್ದು, ಇವು ಸೂಕ್ಷ್ಮ ಮಾಹಿತಿಯನ್ನು ಬೇರ್ಪಡಿಸಿ ಕೇವಲ ಕ್ಯಾನ್ಸರ್ ದತ್ತಾಂಶವನ್ನು ಮಾತ್ರ ಕೇಂದ್ರೀಯ ಸರ್ವರ್‌ನೊಂದಿಗೆ ಹಂಚಿಕೊಳ್ಳುತ್ತವೆ. ಈ ನವೀನ ವಿಧಾನ, ದತ್ತಾಂಶ ಗೌಪ್ಯತೆಯನ್ನು ಉಳಿಸುವ ಜೊತೆಗೆ ಪ್ರತಿರೋಗಿಗೆ ತಕ್ಕಂತೆ ಚಿಕಿತ್ಸೆ ಆಯ್ಕೆ ಮಾಡುವಲ್ಲಿ ವೈದ್ಯರಿಗೆ ಹೆಚ್ಚು ನೆರವಾಗಲಿದೆ.

***********************************

ಇದೇ ೨೦ ರಂದು ಪ್ರಧಾನಿ ನರೆಂದ್ರ ಮೋದಿ ಒಡಿಶಾ ಪ್ರವಾಸ ಕೈಗೊಳ್ಳಲಿದ್ದು, ರಾಜ್ಯ ಬಿಜೆಪಿ ಸರ್ಕಾರದ ಆಡಳಿತದ ಮೊದಲನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮ ಭುವನೇಶ್ವರದ ಜನತಾ ಮೈದಾನದಲ್ಲಿ ನಡೆಯಲಿದ್ದು, ರಾಜ್ಯ ಸರ್ಕಾರದಿಂದ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ.

***********************************

ಇಂಗ್ಲೆಂಡ್ ನ ಐತಿಹಾಸಿಕ ಲಾರ್ಡ್ಸ್ ಕ್ರೀಡಾಗಂಣದಲ್ಲಿ ಇಂದಿನಿಂದ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್ ಫೈನಲ್ ಪಂದ್ಯ ಆರಂಭವಾಗಲಿದೆ. ಪ್ರಶಸ್ತಿಗಾಗಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಸೆಣಸಲಿವೆ. ೨೦೨೩-೨೫ನೇ ಋತುವಿನ ಟೆಸ್ಟ್ ಸರಣಿಗಳಲ್ಲಿ ಮೊದಲೆರಡು ಸ್ಥಾನಗಳನ್ನು ಪಡೆಯುವ ಮೂಲಕ ಉಭಯ ತಂಡಗಳು ಫೈನಲ್ ಪ್ರವೇಶಿಸಿವೆ. ಕಳೆದ ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ಸತತ ಎರಡನೇ ಬಾರಿ ಫೈನಲ್ ಪ್ರವೇಶಿಸಿದರೆ, ದಕ್ಷಿಣ ಆಫ್ರಿಕಾ ಇದೇ ಮೊದಲ ಬಾರಿ ಪ್ರಶಸ್ತಿ ಸುತ್ತಿಗೆ ತಲುಪಿದೆ. ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ ೩ ಗಂಟೆಗೆ ಆರಂಭವಾಗಲಿದೆ.

***********************************

ಇಂದು ಮಹಾನ್ ಕವಿ ಮತ್ತು ಸಮಾಜ ಸುಧಾರಕ ಸಂತ ಕಬೀರ್ ದಾಸ್ ಅವರ ಜನ್ಮ ವಾರ್ಷಿಕೋತ್ಸವ. ಇದರ ಅಂಗವಾಗಿ ಅವರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮದಲ್ಲಿ ಗೌರವ ನಮನ ಸಲ್ಲಿಸಿದ್ದಾರೆ.

***********************************

ಇಸ್ರೇಲ್‌ನ ಸಂಶೋಧಕರು ನಡೆಸಿದ ಹೊಸ ಅಧ್ಯಯನದಲ್ಲಿ ಸಾರ್ಸ್ ಕೋವಿ-೨ ವೈರಸ್‌ನ ಪ್ರೋಟೀನ್ ಅಂಶವೊಂದು ಆರೋಗ್ಯವಂತ ಜೀವಕೋಶಗಳ ಮೇಲೆ ದಾಳಿ ಮಾಡುವ ಸಾಧ್ಯತೆಯಿದೆ ಎಂದು ಪತ್ತೆಯಾಗಿದೆ. ಜೆರುಸಲೆಮ್‌ನ ಹೀಬ್ರೂ ವಿಶ್ವವಿದ್ಯಾಲಯದ ವಿಜ್ಞಾಣಿಗಳು ಈ ಸಂಶೋಧನೆ ನಡೆಸಿದ್ದು, ನ್ಯೂಕ್ಲಿಯೋ ಕ್ಯಾಪ್ಸಿಡ್ ಪ್ರೋಟೀನ್ ಅಂಶ ಈ ಪರಿಣಾಮಕ್ಕೆ ಕಾರಣವಾಗಬಹುದು ಎನ್ನಲಾಗಿದೆ. ಈ ಪ್ರೋಟೀನ್ ದೇಹದ ರೋಗನಿರೋಧಕ ವ್ಯವಸ್ಥೆಯನ್ನು ಮೀರಿ ಆರೋಗ್ಯವಂತ ಜೀವಕೋಶಗಳ ಮೇಲೆ ದಾಳಿ ಮಾಡುವ ಸಾಧ್ಯತೆಯಿದೆ.

***********************************

ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕರೆದೊಯ್ಯುವ ಆಕ್ಸಿಯಮ್ ಮಿಷನ್ ೪ ರ ಉಡಾವಣೆಯನ್ನು ಮುಂದೂಡಲಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಫಾಲ್ಕನ್ ೯ ರ ಬೂಸ್ಟರ್‌ನ ಏಳು ಸೆಕೆಂಡುಗಳ ಬಿಸಿ ಪರೀಕ್ಷೆಯ ಸಮಯದಲ್ಲಿ ದ್ರವ ಆಮ್ಲಜನಕ ಸೋರಿಕೆ ಪತ್ತೆಯಾಗಿದೆ ಎಂದು ಸಚಿವರು ಹೇಳಿದ್ದಾರೆ. ಇಸ್ರೋ, ಆಕ್ಸಿಯಮ್ ಮತ್ತು ಸ್ಪೇಸ್‌ಎಕ್ಸ್ ತಂಡಗಳ ಜಂಟಿ ಪರಿಶೀಲನೆಯ ನಂತರ, ಸಮಸ್ಯೆಯನ್ನು ಸರಿಪಡಿಸಲು ಮತ್ತು ಉಡಾವಣೆಗೆ ಮೊದಲು ಮರುಮೌಲ್ಯಮಾಪನ ಮಾಡಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

***********************************